## Shortage of Food Supply

ಶ್ರೀ ಎಂ. ಎಸ್. ಕೃಷ್ಣನ್. – ಪ್ರಿವಿಲೇಜ್ ಮೋಷನ್ ನೋಟೀಸ್ ಕಳುಹಿಸಿದ್ದೇನೆ, ಬ್ಲಾಕ್ ಕಾಂಗ್ರೆಸ್ ಕಮಿಟಿ, ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಗಳನ್ನು ಸೇರಿಸಿ ಆಹಾರಧಾನ್ಯಗಳನ್ನು ವಿತರಣೆ ಮಾಡುತ್ತಿದ್ದಾರೆ.

ಅಧ್ಯಕ್ಷರು. —ಮಾನ್ಯ ಬಂಗಾರಪ್ಪನವರು ಮೊದಲು ಬಂತು, ನಿಮ್ಮ ನೋಟೀಸ್ ಮೊದಲು ಬರಲಿಲ್ಲ, ಅದನ್ನು ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ. —ಸರ್ಕಾರದ ಖಜಾನೆ ಕಾಂಗ್ರೆಸ್ ಕೈಯಲ್ಲಿ ಆಹಾರವೂ ಇವರ ಕೈಯಲ್ಲಿ ಇದ್ದೆರೆ ಹೇಗೆ ?

ಅಧ್ಯಕ್ಷರು. —ಉತ್ತರ ಬಂದಾಗ ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್. —ಮಾನ್ಯ ಬಂಗಾರಪ್ಪನವರು ಕಳುಹಿಸಿರುವುದು ನನಗೆ ಗೊತ್ತಿಲ್ಲ.

ಅಧ್ಯಕ್ಷರು. —ನಿಮ್ಮ ನೋಟೀಸ್‌ಅನ್ನು ನೋಡುತ್ತೇನೆ, ಮಂತ್ರಿಗಳಿಗೆ ಕಣುಹಿಸಿಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್. —ಇಂಥ ಪ್ರಶ್ನೆಗಳು ಬಂದಾಗ ಮುಖ್ಯಮಂತ್ರಿಗಳು ದುರಾದೃಷ್ಟವಶಾತ್ ಈ ಸಂದರ್ಭದಲ್ಲಿ ಇರುವುದಿಲ್ಲ. ಹೋದ ಸಾರಿ ನನ್ನ ಒಂದು ಪ್ರಶ್ನೆಯ ಸಮಯದಲ್ಲಿಯೂ ಇವರು ಇರಲಿಲ್ಲ. ಆಗ ತಮ್ಮನ್ನು ಕೇಳಿದ, ಅವರು ಇಲ್ಲ ಏನು ಮಾಡುವುದು ಎಂದು ಹೇಳುತ್ತೀರಿ. ಇವತ್ತೂ ಇಲ್ಲ, ಸೋಮವಾರ ನೀವು ಇದನ್ನೇ ಹೇಳಬಹುದು. —ಮಂಗಳವಾರವೂ ಇದನ್ನೇ ಹೇಳಬಹುದು. ಈ ಪ್ರಶ್ನೆಗೆ ಸರ್ಕಾರದ ಉತ್ತರ ಅಮಂಗಳ ಎಂದು ಕಾಣುತ್ತದೆ. ಉತ್ತರ ಬಾರದೆ ಹೋದರೆ ನಮಗೆ ತೊಂದರೆಯಾಗುತ್ತದೆ. ದಯವಿಟ್ಟು ಇದರ ಬಗ್ಗೆ ಸೋಮವಾರದ ದಿವಸ ಉತ್ತರ ಒದಗಿಸಿಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು. —ಚೀಫ್ ಮಿನಿಸ್ಟರ್‌ಗೆ ತಿಳಿಸುತ್ತೇನೆ.

ಶ್ರೀ ಎಂ ಎಸ್. ಕೃಷ್ಣನ್. —ಜವಾಬ್ದಾರಿಯುತವಾಗಿ ವರ್ತಿಸಿದ್ದಾರೆಯೇ ಇಲ್ಲವೇ ಎಂದು ಪ್ರಶ್ನೆ ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ತಾವು ಕೋಪ ಮಾಡಿಕೊಳ್ಳಕೂಡದು.

ಶ್ರೀ ಕೋಣಂದೂರು ಲಿಂಗಪ್ಪ. —ಮಾನ್ಯ ಮುಖ್ಯಮಂತ್ರಿಗಳು ಹಾಜರು ಇಲ್ಲದೆ ಇರುವುದನ್ನು ನೋಡಿದರೆ ಮುಖ್ಯಮಂತ್ರಿಗಳನ್ನು ಹುಡುಕಿಕೊಟ್ಟವರಿಗೆ ಬಹುಮಾನ ಕೊಡುತ್ತೇವೆ ಎಂದು ಪತ್ರಿಕೆಯಲ್ಲಿ ಜಾಹಿರಾತು ಹಾಕುವ ಪರಿಸ್ಥಿತಿ ಬಂದಿದೆ.

ಶ್ರೀ ಎಸ್. ಬಂಗಾರಪ್ಪ. — ನಾನು ಕಾಡ ರೂಲ್ 312ರ ಪ್ರಕಾರ ನೋಟೀಸ್ ಕಳುಹಿಸಿದ್ದೇನೆ ಇದರ ಬಗ್ಗೆ ಖಚಿತವಾಗಿ ಸರ್ಕಾರದವರು ಯಾವಾಗ ಹೇಳಿಕೆ ಕೊಡುತ್ತಾರೆ ಎನ್ನುವುದು ಈ ಸದನಕ್ಕೆ ಗೊತ್ತಾಗಬೇಕು. ಇದು ಬಹಳ ಪ್ರಾಮುಖ್ಯವಾದ ವಿಷಯ.

12-00 NOON

ಅಧ್ಯಕ್ಷರು. —ಸರ್ಕಾರದವರಿಗೆ ಕಳುಹಿಸಿದ್ದೇವೆ. ಉತ್ತರ ಬಂದಾಗ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ. —ಮಾನ್ಯ ಮಂತ್ರಿಗಳು ಬೇರೆಯವರು ಕುಳಿತಿದ್ದಾರೆ. ಬೇರೆ ವಿಷಯ ಬಂದಾಗ ಜಾಯಿಂಟ್ ರೆಸ್‌ಪಾನ್ಸಿಬಿಲಿಟಿ ಇರುವುದರಿಂದ ಇಂಥ ವಿಷಯದಲ್ಲಿ ಏತಕ್ಕೆ ರೆಸ್‌ಪಾನ್ಸಿಬಲಿಟಿ ಉಪಯೋಗಿಸಬಾರದು ?

ಅಧ್ಯಕ್ಷರು. —ನೋಟೀಸನ್ನು ಯಾವಾಗ ಕಳುಹಿಸಿದ್ದೇವೆ. ಅವರು ಇದನ್ನು ಹೇಳಬೇಕು ಇವರು ಹೇಗೆ ಹೇಳುವುದು ?

## Business of the House
## Absence of the Chief Minister

ಶ್ರೀ ಎಸ್. ಬಂಗಾರಪ್ಪ. —ಇನ್ನೊಂದು ವಿಷಯ ಮುಖ್ಯಮಂತ್ರಿಗಳ ಬಗ್ಗೆ ಪುನಃ ಪುನಃ ಹಲವಾರು ಬಾರಿ ಪ್ರಸ್ತಾಪವಾಗುತ್ತಾ ಇದ್ದರೂ ಆಕಡೆ ಕೂತಿರತಕ್ಕ ಸದಸ್ಯರು ಹೇಳದೆ ಇರು

ವುದರಿಂದ ನಾನು ಮಾತ್ರ ಹೇಳುತ್ತೇನೆ. ನಮ್ಮ ರಾಜಕೀಯ ಎಲ್ಲ ಬೇಕಾದರೂ ಮಾಡಿಕೊಳ್ಳಬಹುದು ಎಂದು ಅರ್ಥವಾಗುತ್ತದೆ. ಈ ಸದನ ಪ್ರಾರಂಭವಾದ ಮೇಲೆ ಎಷ್ಟು ದಿವಸ ಅವರು ಈ ಸಭೆಯಲ್ಲಿ ಕೂತಿದ್ದಾರೆ ? ತಮ್ಮ ಪಕ್ಷದ ಸಭೆಗಳಿಗೆ ಬೇರೆ ಬೇರೆ ಕಡೆಗೆ ಹೋಗುತ್ತಾರೆ ?

ಅಧ್ಯಕ್ಷರು.—ತಾವು ಇದನ್ನು ಮುಂದೆ ಬರುವ ದಿವ್ಯಾಂಡಿನಲ್ಲಿ ಹೇಳಿ ಈಗಾಗಲೇ ಇದನ್ನೆಲ್ಲಾ ಹೇಳಿದರೆ ಮುಖ್ಯಾಹ್ನ ಕಳೆಯಿತು ಕೊಳ್ಳಬೇಕಾದ ಕಾರ್ಯಕ್ರಮ ಬೇಕಾಗಿರಲಿಲ್ಲ. ಈಗ ಇಲ್ಲಿ ಮೊದಲೇ ಗೊತ್ತಾದ ಬಿಜಿನೆಸ್ ಮಾಡಬೇಕಾಗಿದೆ. ತಾವು ಈ ರೀತಿ ಟೀಫ್ ಮಿನಿಸ್ಟರ್ ಮತ್ತು ಅವರಿವರ ಬಗ್ಗೆ ಹೇಳುತ್ತಾ ಇದ್ದರೆ ಹೇಗೆ ?

ಶ್ರೀ ಎಸ್. ಬಂಗಾರಪ್ಪ.—ಬಿಜಿನೆಸ್ ಆಗಬೇಕು ನಿಜ. ಅಡಕ್ಕೋನ್ಸರವೇ ನಾನು ಅದರ ಬಗ್ಗೆ ಎರಡನೇ ಮಾತು ಆಡುತ್ತಾ ಇಲ್ಲ. ಈ ಸದನದಲ್ಲಿ ಹಲವಾರು ಪ್ರಾಮುಖ್ಯವಾದ ವಿಷಯಗಳು ಪುಸ್ತಾಪವಾದರೂ ಕೂಡ ಮುಖ್ಯಮಂತ್ರಿಗಳು ಹೇಳಿಕೆ ಕೊಡುವ ಸಂದರ್ಭ ಬರುತ್ತದೆ ಆ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಇರುವುದಿಲ್ಲ ಎಷ್ಟೋ ಸಾರಿ ಅವರನ್ನು ನಾವು ಕಳೆಬಹುದು. ಮುಖ್ಯಮಂತ್ರಿಗಳು ಮೊನ್ನೆ ಕೂಡ ಬಂದಿಲ್ಲ, ಇವೊತ್ತು ಬಂದಿಲ್ಲ. ಅವರು ಈ ಸಭೆಯಲ್ಲಿ ಇರಬೇಕಾದ್ದು ನಮಗೆ ಬೇಕಾಗಿದೆ. ಅವರಿಗೆ ಜವಾಬ್ದಾರಿ ಇದ್ದಹಾಗೆ ಅರ್ಥವಾಗುತ್ತಿಲ್ಲ. ಈ ಸಭೆಯ ಘನತೆ, ಗೌರವ, ಡೆಕೋರಮ್ ಕಡಿಮೆ ಮಾಡುವುದಕ್ಕೆ ಮುಖ್ಯಮಂತ್ರಿಗಳು ಇದ್ದಾರೆ ಹಾಗೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಮುಖ್ಯಮಂತ್ರಿಗಳು ಸಭೆಗೆ ಬರಲೇಬೇಕು.

## Discussion on Demands in the Legislative Council

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀಮಾನ್ ಚೆನ್ನಬಸಪ್ಪನವರು ಮೊನ್ನೆ ದಿವಸ ಒಂದು ಭರವಸೆಯನ್ನು ಈ ಸದನದಲ್ಲಿ ಕೊಟ್ಟಿದ್ದಾರೆ. ಮೊದಲು ಈ ಸದನದಲ್ಲಿ ಈ ಬೇಡಿಕೆಗಳು ಬರುತ್ತವೆ. ಅನಂತರ.....

ಅಧ್ಯಕ್ಷರು.—ಸಾಧ್ಯವಾದ ಮಟ್ಟಿಗೂ ಇಲ್ಲೇ ಮೊದಲು ತೆಗೆದುಕೊಳ್ಳುತ್ತೇವೆಂದು ಹೇಳಿದರು. ಮೇಲ್ಮನೆಯಲ್ಲಿ ಬರೀ ಚರ್ಚೆ ಮಾಡುತ್ತಾರೆ. ಓಟು ಮಾಡುವುದಿಲ್ಲ, ಇದಂಲ್ಲಿ ಪ್ರಿವಿಲೇಜ್ ಬರುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀಮಾನ್ ಚೆನ್ನಬಸಪ್ಪನವರು ಹೇಳಿಕೆ ಕೊಡತಕ್ಕ ಕಾಲದಲ್ಲಿ ವ್ಯವಸಾಯ ಮತ್ತು ಅರಣ್ಯ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ಮಂಡಿಸಿರಲಿಲ್ಲ. ಇಲ್ಲಿ ಯಾವ ಬೇಡಿಕೆಗಳನ್ನು ಇಟ್ಟರೂ ಅದು ಚರ್ಚೆ ಆಗುವವರೆಗೂ ವಿಧಾನಪರಿಷತ್ತಿನಲ್ಲಿ ಚರ್ಚೆ ಆಗುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಭರವಸೆ ಕೊಟ್ಟಿದ್ದಾರೆ. ಭರವಸೆ ಕೊಟ್ಟು ಆದ ಮೇಲೆ.....

ಅಧ್ಯಕ್ಷರು.—ನಾನು ಇಲ್ಲೇ ಇದ್ದೆ ಕೇಳಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಈ ಸಭೆ ಯಾವ ಸಾರ್ವಭೌಮತ್ವದ ಹಕ್ಕನ್ನು ಪಡೆದಿದೆಯೋ ಇಂಥ ಸಭೆಯಲ್ಲಿ ಚರ್ಚೆಯಾಗದ ಬೇಡಿಕೆಗಳನ್ನು, ಅಲ್ಲಿ ಪೂರ್ವಭಾವಿಯಾಗಿ ಚರ್ಚೆ ಮಾಡಿ ಅವಕ್ಕೆ ಉತ್ತರ ಕೊಡತಕ್ಕ ವ್ಯವಸ್ಥೆ ಮಾಡಿದರೆ ಈ ಸದನವಲ್ಲಿ ಬೇಡಿಕೆಗಳನ್ನು ತರುವುದು ಆದರೂ ಏತಕ್ಕೆ ?

ಅಧ್ಯಕ್ಷರು.—ಅವರವರ ನಿಯಮಗಳು ಅವುಗೆ ಇರುತ್ತವೆ. ಅವರ ಹೌಸಿನಲ್ಲಿ ಅವರ ಕಂಟ್ರೋಲ್ ಇದೆ, ನಮ್ಮ ಹೌಸ್‌ಗೆ ಅವರ ಕಂಟ್ರೋಲ್ ಇದೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ತಮ್ಮ ರಕ್ಷಣೆ ಏತಕ್ಕೆ ಬೇಡುತ್ತೇವೆ ! ಯಾವ ರಾಜ್ಯಾಂಗದ ವ್ಯಾಪ್ತಿಯನ್ನು ಈ ಹೌಸಿಗೆ ಕೊಟ್ಟಿದ್ದಾರೆ ?

ಅಧ್ಯಕ್ಷರು.—ಅವರು ಪಾಲಿಸಿ ವಿಷಯ ಚರ್ಚೆ ಮಾಡುತ್ತಾರೆ, ಓಟು ಮಾಡುವುದಿಲ್ಲ. ಅದರಿಂದ ಇದು ಪ್ರಿವಿಲೇಜ್ ಆಗುವುದಿಲ್ಲ.